| ಕರ್ನಾಟಕ ಸರ್ಕಾರ | | | | | (ಸಿ.ಆರ್.ಪಿ-67) |
|---|---|---|---|---|---|
| ಹೇಳಿಕೆ ಹಾಳೆ<br>(ಆರ್.ಪಿ ಸಂಖ್ಯೆ57)<br>ನಮೂನೆ ಸಂಖ್ಯೆ4<br>(ಸಿವಿಲ್) | 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ<br>ಸಿ.ಸಿ ಸಂಖ್ಯೆ 802/2015 | ಸಿಡಬ್ಲೂ | 5 | ಪಿಡಬ್ಲೂ | 3 |

| | |
|---|---|
| ಸಾಕ್ಷಿಯ ಹೆಸರು | ಬಾಳು ಲಕ್ಷ್ಮಣ ಕೋಳಿಕರ |
| ತಂದೆಯ ಹೆಸರು | ಲಕ್ಷ್ಮಣ |
| ವಯಸ್ಸು | 58 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೊಗನೊಳ್ಳಿ ಹಣಬರವಾಡಿ |

<u>ದಿನಾಂಕ 08/02/2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಈಗ ಸುಮಾರು ವರ್ಷಗಳ ಹಿಂದೆ ನಿಪ್ಪಾಣಿ ಗ್ರಾಮೀಣ ಪೋಲೀಸರು ಒಂದು ದಾಖಲೆಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಈಗ ಸದರಿ ದಾಖಲೆಯನ್ನು ನೋಡಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿದ್ದು ಸದರ ದಾಖಲೆಗೆ ಮಾಲು ಜಪ್ತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು ಸಾಕ್ಷಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ನಾನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಾಲು ಜಪ್ತು ಪಂಚನಾಮೆ ಮಾಡಿರುವುದಿಲ್ಲ.

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ದಿಃ 27-11-2014 ರಂದು ನನ್ನನ್ನು ಹಾಗು ಚಾಸಾಃ 4 ರವರನ್ನು ಚಾಸಾಃ 27 ರವರು ನನ್ನನ್ನು ಹಾಗೂ ಚಾಸಾಃ 4 ರವರನ್ನು ಆರ್ ಡಿ ಕ್ರಾಸ್ ಹದ್ದಿಯ ಸೌಂದಲಗಾ ಮಾಂಗೂರ ರಸ್ತೆಯ ಮೇಲೆ ಕರೆಯಿಸಿದ್ದು ಅಲ್ಲಿ ನಮಗೆ ಈ ದಿವಸ ಬೆಳಗ್ಗೆ 3-30 ಗಂಟೆಗೆ ಕೆಲವು ಜನರು ಬೇಡಕಿಹಾಳ ಗ್ರಾಮದ ಸುತ್ತಮುತ್ತ ಕಳ್ಳತನ ಮಾಡಿ ಬೆಳ್ಳಿಯ ಹಾಗೂ ಬಂಗಾರದ ಆಭರಣಗಳ್ಳು ಮಾರಾಟ ಮಾಡುವ ಸಲುವಾಗಿ ಮಾಂಗೂರ ಕಡೆಯಿಂದ ಕೊಲ್ಲಾಪುರ ಕಡೆಗೆ ಹೊರಟಿರುತ್ತರೆ ಅಂತಾ ಮಾಹಿತಿ ಬಂದಿರುತ್ತದೆ ಅಂತಾ ಹೇಳಿದ್ದು ಹಾಗೂ ಚಾಸಾಃ 27 ರವರ ಜೊತೆ ಚಾಸಾಃ 18 ರಿಂದ 24 ರವರು ಸಹ ಇದ್ದು ನಾವೆಲ್ಲರೂ ಸೇರಿ ಸರ್ಕಾರಿ ಜೀಪಿನಲ್ಲಿ 5-00 ಗಂಟೆಗೆ ಆರ್ ಡಿ ಕ್ರಾಸ್ ಹತ್ತಿರ ಬಂದು ವಾಚ್ ಮಾಡುತ್ತಾ ನಿಂತಾಗ 5-30 ಗಂಟೆಗೆ ಕುನ್ನೂರು ಕಡೆಯಿಂದ 3 ದ್ವಿಚಕ್ರ ವಾಹನಗಳ ಮೇಲೆ6 ಜನರು ಬಂದಿದ್ದು ಅವರನ್ನು ಬ್ಯಾಟಗಿ ಬೆಳಕಿನಲ್ಲಿ ನೋಡಿ ಕೈ ಸನ್ನೆ ಮಾಡಿ ನಿಲ್ಲಿಸಲು ಸೂಚಿಸಿದ್ದು ಆದರೆ ಅವರು ವಾಹನವನ್ನು ಜೋರಾಗಿ ನಡೆಸಲು ಪ್ರಯತ್ನಿಸಿದ್ದು ನಂತರ ಸಂಶಯ ಬಂದು ಅವರನ್ನು ಬೆನ್ನಟ್ಟಿ ವಿಚಾರಿಸಿದಾಗ ಅವರು ತಮ್ಮ ಹೆಸರುಗಳನ್ನು ಸಚೀನ ಸನದಿ, ರಾಜು ಬಂಗೆಮಾಳೆ, ರಾಜು ದೇಸಾಯಿ, ಮಂಜುನಾಥ ಕಾಂಬಳೆ, ವಿಶಾಲ

ದೇಸಾಯಿ, ಕಲ್ಲಪ್ಪಾ ಅರಗೆ ಅಂತಾ ಹೇಳಿದ್ದು ನಂತರ ಅವರ ಮೋಟಾರ್ ಸೈಕಲಗಳನ್ನು ನೋಡಿದ್ದು ಅವು ಮಹಾರಾಷ್ಟ್ರದ ಪಾಸಿಂಗಿ ಇದ್ದು ಅವು ನಂಬರ ಪ್ಲೇಟ ಇರಲಿಲ್ಲ. ಅವು ತಮ್ಮ ಹತ್ತಿರ ಇದ್ದ ಕೈಚೀಲಗಳನು  ಮುಚ್ಚಿಕೊಳ್ಳಲು ಪ್ರಯತ್ನಿಸಿದ್ದು ಸಂಶಯ ಬಂದು ಚಾಸಾಃ 27 ರವರು ಚಿಚೀಲಗಳನ್ನು ಚೆಕ್ ಮಾಡಿ ನೋಡಿದಾಗ ಅವುಗಳಲ್ಲಿ ಬಂಗಾರ, ಬೆಳ್ಳಿ ಹಾಗೂ ಹಿತ್ತಾಳೆಯ ಸಾಮಾನುಗಳು ಇದ್ದು ಅವುಗಳ ಬಗ್ಗೆ ಹಾಗೂ ದಾಖಲೆಗಳ ಬಗ್ಗೆ ವಿಚಾರಿಸಿದಾಗ ಅವರು ಯಾವುದೇ ಸಮರ್ಪಕವಾದ ಉತ್ತರ ನೀಡಲಿಲ್ಲ. ಆದ್ದರಿಂದ ಸದರಿ ವಸ್ತುಗಳನ್ನು ಎಲ್ಲಿಯೋ ಕಳ್ಳತನದಿಂದ ಸಂಪಾದಿಸಿಕೊಂಡು ಬಂದಿರುತ್ತಾರೆಂದು ಖಚಿತಪಡಿಸಿಕೊಂಡು ಒಬ್ಬ ಪತ್ತಾರನನ್ನು ಚಾಸಾಃ 27 ರವರು ಸ್ಥಳಕ್ಕೆ ಕರೆಯಿಸಿ ಅವರ ಸಮಕ್ಷಮ ಸದರಿ ವಸ್ತುಗಳ್ನು ತೂಕ ಮಾಡಿಸಿ ಜಪ್ತು ಮಾಡಿಕೊಂಡಿದ್ದು 1. ಸಚೀನ ಸನದಿ ಇತನ ವಶದಿಂದ ಹಿರೋಹೊಂಡಾ ಸ್ಪೇಂಡರ್ ಮೋಟಾರ್ ಸೈಕಲ್ ಒಂದು, 2. ಬೆಳ್ಳಿಯ ಆರತಿ ಸಟ್ಟು, 3. ಬೆಳ್ಳಿಯ ಗಣಪತಿ ಮೂರ್ತಿ, 4. ಹಿತ್ತಾಳೆಯ ಗಂಟೆ, 5. ಪ್ಲಾಸ್ಟಿಕ್ ವಾಯರ್ ಕೈಚೀಲ, 2. ರಾಜು ಭಂಗಮಾಳಿ ಇತನ ವಶದಿಂದ 1. ಬೆಳ್ಳಿಯ ಹಸ್ತಗಳು 2, 2. ಹಿತ್ತಾಳೆಯ ಧೂಪಾರತಿ, 3. ಹಿತ್ತಾಳೆಯ ರೇಣುಕಾದೇವಿ ಮೂಕಟ, 3.  ಪ್ಲಾಸ್ಟಿಕ್ ವಾಯರ್ ಕೈಚೀಲ ಒಂದು, 3. ರಾಜು ದೇಸಾಯಿ ಇತನ ವಶದಿಂದ 1. ಹಿರೋಹೊಂಡಾ ಸಿಡಿ ಡಾನ್ ಮೋಟಾರ್ ಸೈಕಲ್ ಒಂದು, 2.  ಬೆಳ್ಳಿಯ ಲಕ್ಷ್ಮೀ ಮೂರ್ತಿ ಒಂದು, 2. ಹಿತ್ತಾಳೆಯ ಸಮಯ ಒಂದು, 3. ಬಂಗಾರದ ಎಕ್ಸಾರ ಸರ ಒಂದು, 4.  ಬೆಳ್ಳಿಯ ಆರತಿ ಸಟ್ಟು ಒಂದು, 5. ಪ್ಲಾಸ್ಟಿಕ್ ವಾಯರ್ ಕೈಚೀಲ ಒಂದು, 4. ಮಂಜುನಾಥ ಕಾಂಬಳೆ ಇತನ ವಶದಿಂದ 1. ಬಂಗಾರದ ಜುಮುಕಿ ಒಂದು ಜೊತೆ, 2. ಬೆಳ್ಳಿಯ ಉಡದಾರ ಒಂದು, 3. ಬಂಗಾರದ ಗಂಟನ ಒಂದು, 4. ಪ್ಲಾಸ್ಟಿಕ್ ವಾಯರ್ ಕೈಚೀಲ ಒಂದು, 5. ವಿಶಾಲ ದೇಸಾಯಿ ಇತನ ವಶದಿಂದ 1. ಹಿರೋಹೊಂಡಾ ಸ್ಪೇಂಡರ್ ಪ್ಲಸ್ ಮೋಟಾರ್ ಸೈಕಲ್ ಒಂದು, 2. ಬಂಗಾರದ ಮಂಗಳಸೂತ್ರ ಒಂದು 3. ಬೆಳ್ಳಿಯಿ ಗಣೇಶ ಮೂರ್ತಿ, 4. ಪ್ಲಾಸ್ಟಿಕ್ ವಾಯರ್ ಕೈಚೀಲ ಒಂದು, 6. ಕಲ್ಲಪ್ಪಾ ಅರಗೆ ಇತನ ವಶದಿಂದ 1. ಬೆಳ್ಳಿಯ ಛತ್ರಿ ಒಂದು, 2. ಪ್ಲಾಸ್ಟಿಕ್ ವಾಯರ್ ಕೈಚೀಲ ಒಂದು ಇವುಗಳನ್ನು ನನ್ನ ಹಾಗು ಚಾಸಾಃ 5 ರವರ ಸಮಕ್ಷಮ ಜಪ್ತ ಮಾಡಿ ಸ್ಥಳದಲ್ಲಿಯೇ ಆರೋಪಿತನ್ನು ದಸ್ತಗೀರಿ ಮಾಡಿ ನಿಪಿಃ 5 ನ್ನು ಬರೆದು ಓದಿ ಹೇಳಿದ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಆ ದಿನ ಪೋಲೀಸರು ದಸ್ತಗೀರಿ ಮಾಡಿದ ವ್ಯಕ್ತಿಗಳಲ್ಲಿಯ ಸದರಿ ಪ್ರಕರಣದ ಆರೋಪಿ ನಂ.1 ಮತ್ತು 3 ಈಗ ನ್ಯಾಯಾಲಯದ ಮುಂದೆ ಇದ್ದರೂ ಅವರ ಪರಿಚಯವಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಎಲ್ಲ ವಿಷಯ ನಿಜವಿದ್ದರೂ ಈಗ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ-  ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ಪ್ರ.ದ.ನ್ಯಾದಂ.ಗಳು ಚಿಕ್ಕೋಡಿ.